ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

# ಶಿಕ್ಷಣ ಶಾಖೆಯ ಸಾಮಾನ್ಯ ಮಾಹಿತಿ

## ಇಲಾಖಾ ಕಾರ್ಯಕ್ರಮಗಳು

ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿಯವರ ಸರ್ವತೋಮುಖ ಅಭಿವೃದ್ಧಿಗಾಗಿಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಟಾನ ಮಾಡುತ್ತಿದೆ.

1. **ಶೈಕ್ಷಣಿಕ ಕಾರ್ಯಕ್ರಮಗಳು**
2. **ತರಬೇತಿ ಕಾರ್ಯಕ್ರಮಗಳು**
3. **ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು**
4. **ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳು**

## ಶೈಕ್ಷಣಿಕ ಕಾರ್ಯಕ್ರಮಗಳು

ಸಂವಿಧಾನ ಶಿಲ್ಪಿ, ಭಾರತ ರತ್ನ, ಡಾ. ಬಿ.ಆರ್. ಅಂಬೇಡ್ಕರ್‌ರವರು ಹೇಳದಂತೆ ಪರಿಶಿಷ್ಟ ಜಾತಿಯವರ ಅಭಿವೃದ್ಧಿ ಶಿಕ್ಷಣದಿಂದ ಮಾತ್ರ ಸಾಧ್ಯ. ಆದುದರಿಂದ ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿಯವರ ಅಭಿವೃದ್ಧಿಗಾಗಿ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅತೀ ಹೆಚ್ಚಿನ ಮಹತ್ವ ನೀಡಿ ಅನೇಕ ಕಾರ್ಯಕ್ರಮಗಳನ್ನು ಅನುಷ್ಟಾನ ಮಾಡುತ್ತಿದೆ.

### 1. ವಸತಿ ಶಾಲೆಗಳು

ವಸತಿ ಶಾಲೆಗಳಲ್ಲಿ 1 ರಿಂದ 5 ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ಉಚಿತ ಊಟ, ವಸತಿ ಮತ್ತು ಶಿಕ್ಷಣ ನೀಡಲಾಗುವುದು. ಇಲಾಖೆಯಿಂದ ನಿರ್ವಹಿಸುತ್ತಿರುವ ವಸತಿ ಶಾಲೆಗಳ ವಿವರ ಕೆಳಗಿನಂತಿದೆ

| ಶಾಲೆಗಳ ಒಟ್ಟು ಸಂಖ್ಯೆ | ಮಂಜೂರಾತಿ ಸಂಖ್ಯೆ | 2015-16 ನೇ ಸಾಲಿಗೆ ದಾಖಲಾತಿ ಸಂಖ್ಯೆ | ಸ್ವಂತ ಕಟ್ಟಡ | ಬಾಡಿಗೆ ಕಟ್ಟಡ | ಕಾಮಗಾರಿ ಪ್ರಗತಿಯಲ್ಲಿ ರುವುದು | ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೌಲಭ್ಯಗಳ ವಿವರ |
|---|---|---|---|---|---|---|
| 68 | 8500 | 6609 | 65 | 3 | 0 | ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ 800/- ರ ವೆಚ್ಚದಲ್ಲಿ ಊಟ, ತಿಂಡಿ, ವಾರ್ಷಿಕ ರೂ 400/- ರ ವೆಚ್ಚದಲ್ಲಿ ಎರಡು ಜೊತೆ ಸಿದ್ಧ ಪಡಿಸಿದ ಸಮವಸ್ತ್ರ, ಮಾಹೆಯಾನ ರೂ 15/- ರ ವೆಚ್ಚದಲ್ಲಿ ಸೋಪು, ಹಲ್ಲುಪುಡಿ, ಕೊಬ್ಬರಿ ಎಣ್ಣೆ, ವಾರ್ಷಿಕ ರೂ 40/- ರ ವೆಚ್ಚದಲ್ಲಿ ಲೇಖನ ಸಾಮಗ್ರಿ, 3 ವರ್ಷಕ್ಕೊಮ್ಮೆ ರೂ 100/- ರ ವೆಚ್ಚದಲ್ಲಿ ಹಾಸಿಗೆ-ಹೊದಿಕೆ ನೀಡಲಾಗುತ್ತಿದೆ. |

**(ಅನುಷ್ಟಾನಾಧಿಕಾರಿಗಳು:- ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಗ್ರೇಡ್-I/II, ಸಮಾಜ ಕಲ್ಯಾಣ ಇಲಾಖೆ)**

2. **ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು**

ದೂರದ ಊರುಗಳಿಂದ ಶಿಕ್ಷಣ ಪಡೆಯಲು ಬರುವ ಪ.ಜಾತಿಯ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ಉಚಿತ ಊಟ, ವಸತಿ ಮತ್ತಿತರೇ ಸೌಲಭ್ಯ ನೀಡಲಾಗುತ್ತದೆ. ಈ ನಿಲಯಗಳಲ್ಲಿ 5 ನೇ ತರಗತಿಯಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತದೆ. ಇಲಾಖೆಯಿಂದ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ವಿವರ ಕೆಳಗಿನಂತಿದೆ

| | ಒಟ್ಟು ಸಂಖ್ಯೆ | ಮಂಜೂರಾತಿ ಸಂಖ್ಯೆ | 2015-16 ನೇ ಸಾಲಿಗೆ ದಾಖಲಾತಿ ಸಂಖ್ಯೆ | ಸ್ವಂತ ಕಟ್ಟಡ | ಬಾಡಿಗೆ ಕಟ್ಟಡ | ಕಾಮಗಾರಿ ಪ್ರಗತಿಯಲ್ಲಿ ರುವುದು | ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೌಲಭ್ಯಗಳ ವಿವರ |
|---|---|---|---|---|---|---|---|
| ಬಾಲಕರು | 931 | 679715 | 61029 | 836 | 95 | 53 | ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ 1100/- ರ ವೆಚ್ಚದಲ್ಲಿ ಊಟ, ತಿಂಡಿ, ವಾರ್ಷಿಕ ರೂ 305/- ರಿಂದ 955/- ರ ವೆಚ್ಚದಲ್ಲಿ ಸಿದ್ದ ಪಡಿಸಿದ ಸಮವಸ್ತ್ರ, ಮಾಹೆಯಾನ ರೂ 73/- (ಬಾಲಕರಿಗೆ),ರೂ 105/- (ಬಾಲಕಿಯರಿಗೆ) ರ ವೆಚ್ಚದಲ್ಲಿ ಸೋಪು, ಟೂತ್‌ಪೇಸ್ಟ್, ಟೂತ್ ಬ್ರಶ್, ಕೊಬ್ಬರಿ ಎಣ್ಣೆ, ವಾರ್ಷಿಕ ರೂ 400/- ರ ವೆಚ್ಚದಲ್ಲಿ ಲೇಖನ ಸಾಮಗ್ರಿ, ವಾರ್ಷಿಕ ರೂ 300/- ರ ದರದಲ್ಲಿ ಶೂ/ಪ್ಲೋಟರ್ಸ್, 3 ವರ್ಷಕ್ಕೊಮ್ಮೆ ರೂ 800/- ರ ವೆಚ್ಚದಲ್ಲಿ ಹಾಸಿಗೆ-ಹೊದಿಕೆ ನೀಡಲಾಗುತ್ತದೆ. ಬಾಲಕರಿಗೆ ವಾರ್ಷಿಕ ರೂ 150/- ರ ವೆಚ್ಚದಲ್ಲಿ ಹೇರ್ ಕಟ್ ಮಾಡಿಸಲಾಗುತ್ತದೆ. ಪ್ರತಿ ನಿಲಯಕ್ಕೆ ವಾರ್ಷಿಕ ರೂ 5000/- ರಂತೆ ವೈದ್ಯಕೀಯ ವೆಚ್ಚ ಭರಿಸಲಾಗುತ್ತದೆ., ವಾರ್ತಾ ಪತ್ರಿಕೆಗಳಿಗೆ ವಾರ್ಷಿಕ ರೂ 3000/-, ಮೂವರು ಅರೆಕಾಲಿಕ ಬೋಧಕರನ್ನು ನೇಮಿಸಿ ಪ್ರತಿಯೊಬ್ಬರಿಗೆ ಮಾಹೆಯಾನ ರೂ 1000/- ಗೌರವ ಧನವನ್ನು 06 ತಿಂಗಳವರೆಗೆ ನೀಡಲಾಗುತ್ತದೆ. |
| ಬಾಲಕಿಯರು | 300 | 22827 | 21142 | 282 | 18 | 7 | |
| **ಒಟ್ಟು** | **1231** | **90742** | **82171** | **1118** | **113** | **60** | |

**(ಅನುಷ್ಠಾನಾಧಿಕಾರಿಗಳು:- ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಗ್ರೇಡ್-I/II, ಸಮಾಜ ಕಲ್ಯಾಣ ಇಲಾಖೆ)**

### 3. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು

ದೂರದ ಊರುಗಳಿಂದ ಕಾಲೇಜು ಶಿಕ್ಷಣ ಪಡೆಯಲು ಬರುವ ಪ.ಜಾತಿಯ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ಉಚಿತ ಊಟ ಮತ್ತು ವಸತಿ ಸೌಲಭ್ಯ ನೀಡಲಾಗುತ್ತದೆ.

| | ಒಟ್ಟು ಸಂಖ್ಯೆ | ಮಂಜೂರಾತಿ ಸಂಖ್ಯೆ | 2015-16 ನೇ ಸಾಲಿಗೆ ದಾಖಲಾತಿ ಸಂಖ್ಯೆ | ಸ್ವಂತ ಕಟ್ಟಡ | ಬಾಡಿಗೆ ಕಟ್ಟಡ | ಕಾಮಗಾರಿ ಪ್ರಗತಿಯಲ್ಲಿ ರುವುದು | ನೀಡುತ್ತಿರುವ ಸೌಲಭ್ಯಗಳ ವಿವರ |
|---|---|---|---|---|---|---|---|
| **ಬಾಲಕರು** | 339 | 42214 | 35303 | 203 | 136 | 43 | ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ 1200/- ರ ವೆಚ್ಚದಲ್ಲಿ ಊಟ, ತಿಂಡಿ ನೀಡಲಾಗುತ್ತದೆ, ಮೂರು ವರ್ಷಕ್ಕೊಮ್ಮೆ ರೂ 1000/- ವೆಚ್ಚದಲ್ಲಿ ಹಾಸಿಗೆ-ಹೊದಿಕೆ, ಬಾಲಕಿಯರಿಗೆ ಮಾಹೆಯಾನ ರೂ 25/- ರ ವೆಚ್ಚದಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್ ನೀಡಲಾಗುತ್ತದೆ. ವಾರ್ಷಿಕ ರೂ 3500/- ವಾರ್ತಾ ಪತ್ರಿಕೆಗಳಿಗೆ ನೀಡಲಾಗುತ್ತದೆ. |
| **ಬಾಲಕಿಯರು** | 227 | 22848 | 20249 | 120 | 107 | 30 | |
| **ಒಟ್ಟು** | **566** | **65062** | **55552** | **323** | **243** | **73** | |

**(ಅನುಷ್ಟಾನಾಧಿಕಾರಿಗಳು:- ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಗ್ರೇಡ್-I/II, ಸಮಾಜ ಕಲ್ಯಾಣ ಇಲಾಖೆ)**

### 4. ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು

ಪ.ಜಾತಿಯ ಸಂಘ-ಸಂಸ್ಥೆಗಳು ಪ.ಜಾತಿಯವರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು, ಇವರು ನಡೆಸುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಮಾನ್ಯತೆ ನೀಡಿ ಸಹಾಯಧನ ನೀಡಲಾಗುತ್ತದೆ. ಸರ್ಕಾರದಿಂದ ಪ್ರತಿ ವಿದ್ಯಾರ್ಥಿಗೆ ಭೋಜನ ವೆಚ್ಚಕ್ಕಾಗಿ ಮಾಹೆಯಾನ ರೂ 800/- ರ ಸಹಾಯಧನ ನೀಡುತ್ತಿದೆ.

| | ಒಟ್ಟು ಸಂಖ್ಯೆ | ಮಂಜೂರಾತಿ ಸಂಖ್ಯೆ | 2015-16 ನೇ ಸಾಲಿಗೆ ದಾಖಲಾತಿ ಸಂಖ್ಯೆ |
|---|---|---|---|
| **ಬಾಲಕರು** | 166 | 10454 | 9165 |
| **ಬಾಲಕಿಯರು** | 18 | 1142 | 1008 |
| **ಒಟ್ಟು** | **184** | **11596** | **10173** |

**(ಅನುಷ್ಟಾನಾಧಿಕಾರಿಗಳು:- ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಗ್ರೇಡ್-I/II, ಸಮಾಜ ಕಲ್ಯಾಣ ಇಲಾಖೆ)**

## 5. ಅನುದಾನಿತ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು

ಪ.ಜಾತಿಯ ಸಂಘ-ಸಂಸ್ಥೆಗಳು ಪ.ಜಾತಿಯವರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು, ಇವರು ನಡೆಸುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಮಾನ್ಯತೆ ನೀಡಿ ಸಹಾಯಧನ ನೀಡಲಾಗುತ್ತದೆ. ಸರ್ಕಾರದಿಂದ ಪ್ರತಿ ವಿದ್ಯಾರ್ಥಿಗೆ ಭೋಜನ ವೆಚ್ಚಕ್ಕಾಗಿ ಮಾಹೆಯಾನ ರೂ ೯೦೦/- ರ ಸಹಾಯಧನ ನೀಡುತ್ತಿದೆ. ಈ ವಿದ್ಯಾರ್ಥಿ ನಿಲಯಗಳಿಗೆ ಸಹಾಯಧನವನ್ನು ಮೆ.ನಂತರದ ವಿ.ವೇತನ ಮತ್ತು ಇ.ಬಿ.ಎಲ್ ವೆಚ್ಚಗಳಿಂದ ಭರಿಸಲಾಗುತ್ತದೆ.

| | ಒಟ್ಟು ಸಂಖ್ಯೆ | ಮಂಜೂರಾತಿ ಸಂಖ್ಯೆ | 2015-16 ನೇ ಸಾಲಿಗೆ ದಾಖಲಾತಿ ಸಂಖ್ಯೆ |
|---|---|---|---|
| **ಬಾಲಕರು** | 45 | 3660 | 3069 |
| **ಬಾಲಕಿಯರು** | 3 | 200 | 200 |
| **ಒಟ್ಟು** | **48** | **3860** | **3269** |

**(ಅನುಷ್ಠಾನಾಧಿಕಾರಿಗಳು:- ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಗ್ರೇಡ್-I/II, ಸಮಾಜ ಕಲ್ಯಾಣ ಇಲಾಖೆ)**

## 6. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

ಪ.ಜಾತಿಯ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಮುಂದುವರೆಸಲು ಉತ್ತೇಜನ ನೀಡುವ ಸಲುವಾಗಿ ಪೋಷಕರ ಆದಾಯ ವಾರ್ಷಿಕ ರೂ 2.00 ಲಕ್ಷ ಮಿತಿಯೊಳಗಿನ ವಿದ್ಯಾರ್ಥಿಗಳಿಗೆ ಕೆಳಕಂಡಂತೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.

| ತರಗತಿ | ಬಾಲಕರು | ಬಾಲಕಿಯರು |
|---|---|---|
| **1 ರಿಂದ 5** | ವಾರ್ಷಿಕ ರೂ 750 | ವಾರ್ಷಿಕ ರೂ 850 |
| **6 ರಿಂದ 7** | ವಾರ್ಷಿಕ ರೂ 900 | ವಾರ್ಷಿಕ ರೂ 1000 |
| **8 ನೇತರಗತಿ** | ವಾರ್ಷಿಕ ರೂ 1000 | ವಾರ್ಷಿಕ ರೂ 1100 |

**(ಅನುಷ್ಠಾನಾಧಿಕಾರಿಗಳು:- ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಗ್ರೇಡ್-I/II, ಸಮಾಜ ಕಲ್ಯಾಣ ಇಲಾಖೆ)**

## 7. ಭಾರತ ಸರ್ಕಾರದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

ಪ.ಜಾತಿಯ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಮುಂದುವರೆಸಲು ಉತ್ತೇಜನ ನೀಡುವ ಸಲುವಾಗಿ ಪೋಷಕರ ಆದಾಯ ವಾರ್ಷಿಕ ರೂ 2.00 ಲಕ್ಷ ಮಿತಿಯೊಳಗಿನ 9 ಮತ್ತು 10 ನೇ ತರಗತಿ ವಿದ್ಯಾರ್ಥಿಗಳಿಗೆ ಕೆಳಕಂಡಂತೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.

| | **ಡೇ ಸ್ಕಾಲರ್ಸ್** | **ಹಾಸ್ಟಲರ್ಸ್** |
|---|---|---|
| **ನಿರ್ವಹಣಾ ವೆಚ್ಚ** | ಮಾಹೆಯಾನ ರೂ 150 ರಂತೆ 10 ತಿಂಗಳಿಗೆ | ಮಾಹೆಯಾನ ರೂ 350 ರಂತೆ 10 ತಿಂಗಳಿಗೆ |
| **ಅಡಾಕ್ ಅನುದಾನ** | ವಾರ್ಷಿಕ ರೂ 750 | ವಾರ್ಷಿಕ ರೂ 1000 |

**(ಅನುಷ್ಠಾನಾಧಿಕಾರಿಗಳು:- ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಗ್ರೇಡ್-I/II, ಸಮಾಜ ಕಲ್ಯಾಣ ಇಲಾಖೆ)**

## 8. ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗೆ ಭಾರತ ಸರ್ಕಾರದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳು ಶಿಕ್ಷಣವನ್ನು ಮುಂದುವರೆಸಲು ಉತ್ತೇಜನ ನೀಡುವ ಸಲುವಾಗಿ ವಿದ್ಯಾರ್ಥಿಗಳಿಗೆ ಕೆಳಕಂಡಂತೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.

| | **ಡೇ ಸ್ಕಾಲರ್ಸ್ (1-10 ನೇ ತರಗತಿ)** | **ಹಾಸ್ಟಲರ್ಸ್ (3-10 ನೇತರಗತಿ)** |
|---|---|---|
| **ನಿರ್ವಹಣಾ ವೆಚ್ಚ** | ಮಾಹೆಯಾನ ರೂ 110 ರಂತೆ 10 ತಿಂಗಳಿಗೆ | ಮಾಹೆಯಾನ ರೂ 700 ರಂತೆ 10 ತಿಂಗಳಿಗೆ |
| **ಅಡಾಕ್ ಅನುದಾನ** | ವಾರ್ಷಿಕ ರೂ 750 | ವಾರ್ಷಿಕ ರೂ 1000 |

**(ಅನುಷ್ಠಾನಾಧಿಕಾರಿಗಳು:- ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಗ್ರೇಡ್-I/II, ಸಮಾಜ ಕಲ್ಯಾಣ ಇಲಾಖೆ)**

## ೯. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಪ.ಜಾತಿಯ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಮುಂದುವರೆಸಲು ಅನುಕೂಲವಾಗುವಂತೆ ಪೋಷಕರ ಆದಾಯ ವಾರ್ಷಿಕ ರೂ ೨.೫೦ ಲಕ್ಷ ಮಿತಿಯೊಳಗಿನ ಕಾಲೇಜು ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಇಲ್ಲಿ ಕಾಲೇಜುಗಳಿಗೆ ಪಾವತಿಸಬೇಕಾಗಿರುವ ಮರುಪಾವತಿಸಲಾಗದ ಕಡ್ಡಾಯ ಶುಲ್ಕಗಳ ಜೊತೆಗೆ ಕೆಳಕಂಡ ದರಗಳಲ್ಲಿ ನಿರ್ವಹಣಾ ಭತ್ಯೆಯನ್ನು ನೀಡಲಾಗುತ್ತದೆ.

| **ಕೋರ್ಸ ಗ್ರೂಪ್** | **ಡೇ ಸ್ಕಾಲರ್ಸ** | **ಹಾಸ್ಟಲರ್ಸ** |
|---|---|---|
| **1 – ಇಂನಿಯರಿಂಗ, ಮೆಡಿಕಲ್. ಸಿ ಎ ಇತ್ಯಾದಿ** | ಮಾಹೆಯಾನ ರೂ ೫೫೦ | ಮಾಹೆಯಾನ ರೂ ೧೨೦೦ |
| **2 –ಸ್ನಾತಕೋತ್ತರ ಪದವಿ, ಎಂ.ಎ, ಎಂ ಕಾಮ್, ಎಂ.ಎಸ್ಸಿ ಇತ್ಯಾದಿ** | ಮಾಹೆಯಾನ ರೂ ೫೩೦ | ಮಾಹೆಯಾನ ರೂ ೮೨೦ |
| **3– ಪದವಿ, ಬಿ.ಎ, ಬಿ.ಕಾಮ್, ಬಿ.ಎಸ್ಸಿ ಇತ್ಯಾದಿ** | ಮಾಹೆಯಾನ ರೂ ೩೦೦ | ಮಾಹೆಯಾನ ರೂ ೫೭೦ |
| **4–ಪಿ.ಯು.ಸಿ ತತ್ಸಮಾನ** | ಮಾಹೆಯಾನ ರೂ ೨೩೦ | ಮಾಹೆಯಾನ ರೂ ೩೮೦ |

**(ಅನುಷ್ಠಾನಾಧಿಕಾರಿಗಳು:– ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಗ್ರೇಡ್–I/II, ಸಮಾಜ ಕಲ್ಯಾಣ ಇಲಾಖೆ)**

## ೧೦. ಬುಕ್ ಬ್ಯಾಂಕ್ ಯೋಜನೆ

ಕಾಲೇಜುಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ಪ.ಜಾತಿಯ ವಿದ್ಯಾರ್ಥಿಗಳಿಗೆ ರೆಫೆರೆನ್ಸ ಪುಸ್ತಕಗಳನ್ನು ನೀಡುವ ಸಲುವಾಗಿ ಕಾಲೇಜಿನ ಲೈಬ್ರರಿಯಲ್ಲಿ ಬುಕ್ ಬ್ಯಾಂಕ್ ಸ್ಥಾಪಿಸಲಾಗುತ್ತದೆ. ವಿದ್ಯಾರ್ಥಿಗಳು ಪುಸ್ತಕಗಳನ್ನು ಪಡೆದು ಅವುಗಳ ಉಪಯೋಗ ಪಡೆದು ನಂತರ ವಾಪಾಸು ನೀಡಬೇಕು.

1. ಎಂ.ಬಿ.ಬಿ.ಎಸ್/ತಾಂತ್ರಿಕ ಪದವಿ ಕೋರ್ಸುಗಳ ೦೨ ವಿದ್ಯಾರ್ಥಿಗಳಿಗೆ ಒಂದು ಸೆಟ್ ನಂತೆ ರೂ ೭೫೦೦/– ರ ವೆಚ್ಚದಲ್ಲಿ ಪುಸ್ತಕಗಳನ್ನು ಖರೀದಿಸಿ ಕಾಲೇಜುಗಳಿಗೆ ನೀಡಲಾಗುತ್ತದೆ.
2. ಪಶು ಸಂಗೋಪನೆ ಪದವಿ ಕೋರ್ಸುಗಳ ೦೨ ವಿದ್ಯಾರ್ಥಿಗಳಿಗೆ ಒಂದು ಸೆಟ್ ನಂತೆ ರೂ ೫೦೦೦/– ರ ವೆಚ್ಚದಲ್ಲಿ ಪುಸ್ತಕಗಳನ್ನು ಖರೀದಿಸಿ ಕಾಲೇಜುಗಳಿಗೆ ನೀಡಲಾಗುತ್ತದೆ.
3. ಕೃಷಿ ಪದವಿ ಕೋರ್ಸುಗಳ ೦೨ ವಿದ್ಯಾರ್ಥಿಗಳಿಗೆ ಒಂದು ಸೆಟ್ ನಂತೆ ರೂ ೪೫೦೦/– ರ ವೆಚ್ಚದಲ್ಲಿ ಪುಸ್ತಕಗಳನ್ನು ಖರೀದಿಸಿ ಕಾಲೇಜುಗಳಿಗೆ ನೀಡಲಾಗುತ್ತದೆ. ಪಾಲಿಟೆಕ್ನಿಕ್ ಕೋರ್ಸುಗಳ ೦೨ ವಿದ್ಯಾರ್ಥಿಗಳಿಗೆ ಒಂದು ಸೆಟ್‌ನಂತೆ ರೂ ೨೪೦೦/– ರ ವೆಚ್ಚದಲ್ಲಿ ಪುಸ್ತಕಗಳನ್ನು ಖರೀದಿಸಿ ಕಾಲೇಜುಗಳಿಗೆ ನೀಡಲಾಗುತ್ತದೆ.

4. ಸ್ನಾತಕೋತ್ತರ ಪದವಿ ಕೋರ್ಸುಗಳ (ವೈದ್ಯಕೀಯ, ತಾಂತ್ರಿಕ, ಎಲ್.ಎಲ್.ಬಿ, ಎಲ್.ಎಲ್.ಎಂ, ಸಿ.ಎ, ಎಂ.ಬಿ.ಎ, ಬಯೋ ಸೈನ್ಸ) ಒಬ್ಬ ವಿದ್ಯಾರ್ಥಿಗೆ ಒಂದು ಸೆಟ್ ನಂತೆ ರೂ 5000/- ರ ವೆಚ್ಚದಲ್ಲಿ ಪುಸ್ತಕಗಳನ್ನು ಖರೀದಿಸಿ ಕಾಲೇಜುಗಳಿಗೆ ನೀಡಲಾಗುತ್ತದೆ.

ಈ ಪುಸ್ತಕಗಳನ್ನಿರಿಸಲು ಅಲಮಿರಾ ಖರೀದಿಸಲು ರೂ 2000/- ಮತ್ತು ಸಾಗಣಿಕಾ ವೆಚ್ಚ ರೂ 100/- ನ್ನು ನೀಡಲಾಗುತ್ತದೆ.

**(ಅನುಷ್ಟಾನಾಧಿಕಾರಿಗಳು:- ಆಯಾ ಜಿಲ್ಲೆಯ ಜಂಟಿ/ಉಪ ನಿರ್ದೇಶಕರು , ಸಮಾಜ ಕಲ್ಯಾಣ ಇಲಾಖೆ)**

## 11. ಅಪ್ ಗ್ರೇಡೇಷನ್ ಆಫ್ ಮೆರಿಟ್

ಈ ಯೋಜನೆಯನ್ನು ಅನುಷ್ಟಾನ ಮಾಡಲು ಭಾರತ ಸರ್ಕಾರವು 100% ಅನುದಾನವನ್ನು ನೀಡುತ್ತಿದೆ. ಈ ಯೋಜನೆಯಡಿ ಪ.ಜಾತಿಯ 9 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳಿಗೆ ವಿಶೇಷ ಭೋಧನೆಯನ್ನು ನೀಡಿ ಅವರು ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಇಂಜಿನಿಯರಿಂಗ್, ಮೆಡಿಕಲ್ ಕೋರ್ಸುಗಳಲ್ಲಿ ಪ್ರವೇಶ ಪಡೆಯಲು ಸಜ್ಜುಗೊಳಿಸಲಾಗುವುದು. ಯೋಜನೆಯ ವಿವರಗಳು ಕೆಳಗಿನಂತಿವೆ.

**ಊಟ ಮತ್ತು ವಸತಿ ವೆಚ್ಚ** : ಮಾಹೆಯಾನ ರೂ 900/- ರಂತೆ 10 ತಿಂಗಳಿಗೆ
**ಪಾಕೆಟ್ ಮನಿ** : ಮಾಹೆಯಾನ ರೂ 300 ರಂತೆ 10 ತಿಂಗಳಿಗೆ
**ಲೇಖನ ಸಾಮಗ್ರಿ ಮತ್ತು ಪಠ್ಯ ಪುಸ್ತಕಗಳು** : ವಾರ್ಷಿಕ ರೂ 3000/-
**ಪ್ರಿನ್ಸಿಪಾಲ್ ಮತ್ತು ಎಕ್ಸಪರ್ಟ ಗೆಸ್ಟ್ ಲೆಕ್ಚರರ್ಸ್‌ಗೆ ಗೌರವ ಧನ** : ರೂ 10000/-
ಈ ಯೋಜನೆಯನ್ನು 08 ಜಿಲ್ಲೆಗಳಲ್ಲಿ ಅನುಷ್ಟಾನ ಮಾಡಲಾಗುತ್ತಿದೆ.

**(ಅನುಷ್ಟಾನಾಧಿಕಾರಿಗಳು:- ಆಯಾ ಜಿಲ್ಲೆಯ ಜಂಟಿ/ಉಪ ನಿರ್ದೇಶಕರು , ಸಮಾಜ ಕಲ್ಯಾಣ ಇಲಾಖೆ)**

## 12. ಪ್ರತಿಷ್ಟಿತ ಶಾಲೆಗಳಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪ್ರವೇಶ

ಈ ಯೋಜನೆಯಡಿ ಕುಟುಂಬದ ಆದಾಯ ರೂ 2.00 ಲಕ್ಷದ ಒಳಗೆ ಇರುವ ಮತ್ತು 5 ನೇ ತರಗತಿಯಲ್ಲಿ ಕನಿಷ್ಟ 60% ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು (ವಾರ್ಷಿಕ ಗುರಿ 1000) ರಾಜ್ಯದಲ್ಲಿರುವ ಪ್ರತಿಷ್ಟಿತ ಶಾಲೆಗಳಿಗೆ 06 ನೇತರಗತಿಗೆ ದಾಖಲಿಸಿ ವಾರ್ಷಿಕ ಗರಿಷ್ಟ ರೂ 50,000/- ಗಳ ಶಾಲಾ ಶುಲ್ಕ ಮತ್ತು ಇತರೇ ಶುಲ್ಕಗಳನ್ನು ನೀಡಲಾಗುವುದು.

**(ಅನುಷ್ಟಾನಾಧಿಕಾರಿಗಳು:- ಆಯಾ ಜಿಲ್ಲೆಯ ಜಂಟಿ/ಉಪ ನಿರ್ದೇಶಕರು , ಹಾಗೂ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ)**

## 13. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ

1. ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ 60% ರಿಂದ 74.99% ಅಂಕಗಳನ್ನು ಗಳಿಸಿದ ಪ.ಜಾತಿಯ ವಿದ್ಯಾರ್ಥಿಗಳಿಗೆ ರೂ 7000/- ಮತ್ತು 75% ಮತ್ತು ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿದ ಪ.ಜಾತಿಯ ವಿದ್ಯಾರ್ಥಿಗಳಿಗೆ ರೂ 15000/- ಗಳ ಪೋತ್ಸಾಹ ಧನ ವಿತರಿಸಲಾಗುವುದು.

**(ಅನುಷ್ಟಾನಾಧಿಕಾರಿಗಳು: ಕರ್ನಾಟಕ ಪ್ರೌಢಶಿಕ್ಷಣ ಮಂಡಳ, ಬೆಂಗಳೂರು)**

- ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದವರಿಗೆ ರೂ 20000/- ಗಳ ಪ್ರೋತ್ಸಾಹ ಧನ ನೀಡಲಾಗುವುದು
- ಪದವಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದವರಿಗೆ ರೂ 25000/- ಗಳ ಪ್ರೋತ್ಸಾಹ ಧನ ನೀಡಲಾಗುವುದು
- ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದವರಿಗೆ ರೂ 30000/- ಗಳ ಪ್ರೋತ್ಸಾಹ ಧನ ನೀಡಲಾಗುವುದು
- ಇಂಜಿನಿಯರಿಂಗ್, ಮೆಡಿಕಲ್ ಇತ್ಯಾದಿ ಕೋರ್ಸುಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದವರಿಗೆ ರೂ 35000/- ಗಳ ಪ್ರೋತ್ಸಾಹ ಧನ ನೀಡಲಾಗುವುದು
- **(ಅನುಷ್ಠಾನಾಧಿಕಾರಿಗಳು:- ಆಯಾ ಜಿಲ್ಲೆಯ ಜಂಟಿ/ಉಪ ನಿರ್ದೇಶಕರು , ಸಮಾಜ ಕಲ್ಯಾಣ ಇಲಾಖೆ)**

2. ಐ.ಐ.ಟಿ / ಐ.ಐ.ಎಂ / ಐ.ಐ.ಎಸ್.ಸಿ ಮತ್ತು ಎನ್.ಐ.ಟಿ ಅಂತಹ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ, ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಅರ್ಹರಲ್ಲದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಒಂದು ಅವಧಿಯ ಧನ ಸಹಾಯ-ಶುಲ್ಕ ರೂ.1.00 ಲಕ್ಷ ಅಥವಾ ಪಾವತಿಸಬೇಕಾದ ಕಡ್ಡಾಯ ಶುಲ್ಕ ಮತ್ತು ಊಟದ ವೆಚ್ಚ ಮುಂತಾದವು. ಇವೆರಡರಲ್ಲಿ ಯಾವುದು ಕಡಿಮೆಯೋ ಆ ಮೊತ್ತವನ್ನು ಕೋರ್ಸ್‌ನ ಪೂರ್ಣ ಅವಧಿಗೆ ಮಂಜೂರು ಮಾಡಲಾಗುವುದು.

**(ಅನುಷ್ಠಾನಾಧಿಕಾರಿಗಳು:- ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ,)**

## 14. ಪ.ಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ

ಪರಿಶಿಷ್ಟ ಜಾತಿ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳಲ್ಲಿ/ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ವೈಯಕ್ತಿಕ ಶೌಚಾಲಯ, ಚರಂಡಿ ಅಭಿವೃದ್ಧಿ/ ಒಳಚರಂಡಿ ಮತ್ತು ಕಾಂಕ್ರೀಟ್ ರಸ್ತೆಗಳ ನಿರ್ಮಾಣ ಕಾಮಗಾರಿಗಳನ್ನು ಒದಗಿಸುವ ಕಾರ್ಯಕ್ರಮವನ್ನು ಇಲಾಖೆಯಿಂದ ಅನುಷ್ಟಾನ ಮಾಡಲಾಗುತ್ತಿದೆ.

## 15. ಡಾ.ಬಿ.ಆರ್ ಅಂಬೇಡ್ಕರ್ ಭವನ/ಬಾಬು ಜಗಜೀವನರಾಮ ಭವನ/ಸಮುದಾಯಭವನಗಳ ನಿರ್ಮಾಣ

ಪರಿಶಿಷ್ಟ ಜಾತಿ ಜನಾಂಗದವರ ಸಾಂಸ್ಕೃತಿಕ ಸಮಾರಂಭ, ಸಭೆ ಮತ್ತು ಮದುವೆ ಇತರೇ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುವಂತೆ ಸರ್ಕಾರವು ಗ್ರಾಮೀಣ ಪ್ರದೇಶಗಳಲ್ಲಿ ರೂ 10.00 ಲಕ್ಷ, ಹೋಬಳಿ ಮಟ್ಟದಲ್ಲಿ ರೂ 50.00 ಲಕ್ಷ, ತಾಲೂಕು ಮಟ್ಟದಲ್ಲಿ ರೂ 100.00 ಲಕ್ಷ ಮತ್ತು ಜಿಲ್ಲಾ ಮಟ್ಟದಲ್ಲಿ ರೂ 300.00 ಲಕ್ಷಗಳ ವೆಚ್ಚದಲ್ಲಿ ಭವನಗಳ ನಿರ್ಮಾಣ ಕಾರ್ಯಕ್ರಮವನ್ನು ಅನುಷ್ಠಾನ ಮಾಡುತ್ತಿದೆ.